# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಪಾಂಡವಪುರ

## ಸಿ.ಸಿ . 229/2025

**ಪಿರ್ಯಾಧಿ ಃ ಕೆ ಆರ್ ಸಾಗರ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿಗಳು ಃ ಚನ್ನಕೇಶವ ಮತ್ತು ಇತರರು**

## ದೋಷಾರೋಪಣೆ

**ಶ್ರೀ ಆರ್.ಮಹೇಶ., ಬಿ.ಎ.ಎಲ್, ಎಲ್.ಎಲ್.ಬಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಪಾಂಡವಪುರ, ಆದ ನಾನು ಆರೋಪಿಗಳಾದ**

1. ಚನ್ನಕೇಶವ ಬಿನ್ ಲೇಟ್ ದೇವರಗುಡ್ಡಯ್ಯ, 53 ವರ್ಷ.
2. ಸಣ್ಣಯ್ಯ ಬಿನ್ ಲೇಟ್ ದೇವರಗುಡ್ಡಯ್ಯ, 55 ವರ್ಷ.
3. ರಾಚಯ್ಯ ಬಿನ್ ಲೇಟ್ ದೇವರಗುಡ್ಡಯ, 45 ವರ್ಷ.
4. ಪ್ರಕಾಶ ಬಿನ್ ಲೇಟ್ ದೇವರಗುಡ್ಡಯ್ಯ , 45 ವರ್ಷ.
5. ಕೃಷ್ಣ ಬಿನ್ ಲೇಟ್ ದೇವಲಿಂಗಯ್ಯ, 43 ವರ್ಷ.
6. ಮರುಗಯ್ಯ ಬಿನ್ ಲೇಟ್ ಕುಳ್ಳಯ್ಯ, 58 ವರ್ಷ.
7. ರಾಮಶೆಟ್ಟಿ ಬಿನ್ ಲೇಟ್ ಹನುಮಂತಶೆಟ್ಟಿ, 55 ವರ್ಷ.
8. ನವೀನ ಬಿನ್ ಮರೀಗೌಡ, 44 ವರ್ಷ.

ಎಲ್ಲರು ವಾಸಃ ಗಿರಿಯಾರಹಳ್ಳಿ ಗ್ರಾಮ, ಪಾಂಡವಪುರ ತಾಲ್ಲೂಕು.

ನಿಮ್ಮನ್ನು ಈ ಕೆಳಕಂಡ ದೋಷಾರೋಪಣೆಗೆ ಗುರಿಪಡಿಸುತ್ತೇನೆ

ದಿಃ 02.06.2024 ರಂದು ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಕೆ ಆರ್ ಸಾಗರ ಪೊಲೀಸ್ ಠಾಣಾ ಸರಹದ್ದಿಗೆ ಪಾಂಡವಪುರ ತಾಲ್ಲೂಕು, ಚಿನಕುರಳಿ ಹೋಬಳಿ,

ಅಂತನಹಳ್ಳಿ ಗ್ರಾಮದ ಸರ್ವೆ ನಂಃ 86 ರ ಜಮೀನಿನಲ್ಲಿ ಸಾಕ್ಷಿ.1 ಮತ್ತು 2 ರವರು ಜೆ ಸಿ ಬಿ ಯಿಂದ ಬದುವನ್ನು ಹಾಕಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ, 1 ರಿಂದ 8 ನೇ ಆರೋಪಿಗಳಾದ ನೀವುಗಳು ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು **ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಮುಂದುವರಿದು ದೊಣ್ಣೆ ಮತ್ತು ಕುಡುಗೋಲನ್ನು ಕೈಗಳಲ್ಲಿ ಹಿಡಿದುಕೊಂಡು ದೊಂಬಿ ಗಲಾಟೆ ಮಾಡಿ **ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಅಕ್ರಮ ಕೂಟದ ಸಮಾನ ಉದ್ದೇಶವನ್ನು ಮುಂದುವರಿಸಿ 1 ನೇ ಆರೋಪಿಯಾದ ನೀವು ಸಾಕ್ಷಿ.1 ರವರುನ್ನು ಉದ್ದೇಶಿಸಿ ಬೋಳಿಮಗನೆ, ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಹಾಗೂ ದಿಃ 14.06.2024 ರಂದು ಮದ್ಯಾಹ್ನ 1.00 ಗಂಟೆ ಸಮಯದಲ್ಲಿ ಸಾಕ್ಷಿ.1 ರವರ ಬಾಬ್ತು ಸರ್ವೆ ನಂಃ 86 ರ ಜಮೀನಿನಲ್ಲಿ 8 ನೇ ಆರೋಪಿಯಾದ ನೀವು ಅವರ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದು ಅದನ್ನು ಪ್ರಶ್ನೆ ಮಾಡಿದ ಸಾಕ್ಷಿ.1 ರವರಿಗೆ ನೀವು ಬೋಳಿಮಗನೇ ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು, **ಭಾರತೀಯ**

**ದಂಡ ಸಂಹಿತೆ ಕಲಂ 504 ಜೊತೆಗೆ ಕಲಂ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ 8 ನೇ ಆರೋಪಿಯಾದ ನೀವು ಅಕ್ರಮ ಕೂಟದ ಸಮಾನ ಉದ್ದೇಶವನ್ನು ಮುಂದುವರಿಸಿ ಸಾಕ್ಷಿ.1 ರವರಿಗೆ ಪ್ರಾಣ ಬೆದರಿಕೆ ಹಾಕಿ **ಭಾರತೀಯ ದಂಡ ಸಂಹಿತೆ ಕಲಂ 506 ಜೊತೆಗೆ ಕಲಂ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಅಕ್ರಮ ಕೂಟದ ಸಮಾನ ಉದ್ದೇಶವನ್ನು ಮುಂದುವರಿಸಿ ಮಾರಕಾಸ್ತ್ರಗಳಾದ ದೊಣ್ಣೆ ಮತ್ತು ಕುಡುಗೋಲನ್ನು ಹಿಡಿದುಕೊಂಡು ದೊಂಬಿ ಗಲಾಟೆ ಮಾಡಿ ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಅಕ್ರಮ ಕೂಟದ ಸಮಾನ ಉದ್ದೇಶವನ್ನು ಮುಂದುವರಿಸಿ ಆರೋಪಿಗಳಾದ ನೀವು ಸಾಕ್ಷಿ.1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಭಾರತೀಯ ದಂಡ ಸಂಹಿತೆ ಕಲಂ 447 ಸಹ ವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಅಕ್ರಮ ಕೂಟದ ಸಮಾನ ಉದ್ದೇಶವನ್ನು ಮುಂದುವರಿಸಿ ಸಾಕ್ಷಿ.1 ರವರು ಅವರ ಜಮೀನಿನಲ್ಲಿ ಕೆಲಸ ಮಾಡದಂತೆ ತಡೆದು, ಭಾರತೀಯ ದಂಡ ಸಂಹಿತೆ ಕಲಂ 341 ಸಹ ವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ಪ್ರಶ್ನೆ:1ಃ ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆಯು ತಿಳಿಯಿತೇ?**

**ಉತ್ತರಃ** 1. 2. 3.

4. 5. 6.

7. 8.

**ಪ್ರಶ್ನೆ:2ಃ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಅಧಿವಿಚಾರಣೆ ಬಯಸುತ್ತೀರಾ?**

**ಉತ್ತರಃ** 1. 2. 3.

4. 5. 6.

7. 8.

**(ಮೇಲಿನ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರ ಉತ್ತರವನ್ನು ದಾಖಲಿಸಿದೆ ಎಂದು ದೃಢೀಕರಿಸಿದೆ.)**

ದಿಃ 23.06.2025 (ಆರ್.ಮಹೇಶ್)

ಸ್ಥಳಃ ಪಾಂಡವಪುರ. ಹಿರಿಯ ಸಿವಿಲ್ ನ್ಯಾಯಾಧೀಶರು

***ಮತ್ತು ಪ್ರ.ದ.ನ್ಯಾದಂ., ಪಾಂಡವಪುರ.***